ದಿನಾಂಕಃ 16.07.2026 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

ಪಾಟೀ ಸವಾಲುಃ ಆರೋಪಿಯ ಪರವಾಗಿ ಶ್ರೀ ಹೆಚ್.ಎ.ಟಿ. ವಕೀಲರಿಂದಃ -

5. ನನಗೆ 9.15 ಗಂಟೆಗೆ ಫೋನ್ ಬಂದಿತ್ತು. ಆ ಸಂದರ್ಭದಲ್ಲಿ ನಾನು ನಮ್ಮ ಊರಾದ ಕೆಸವಳಲಿನಲ್ಲಿ ಇದ್ದೆ. ಫೋನ್ ಬಂದು 10 ನಿಮಿಷಕ್ಕೆ ನಾನು ಹೊರಟೆ. ನನ್ನ ಮನೆಯಿಂದ ಆಟೋ ನಿಂತಿತ್ತು ಎಂದು ಹೇಳುವ ಸ್ಥಳಕ್ಕೆ ಹೋಗಲು 10 ನಿಮಿಷ ಬೇಕಾಗುತ್ತದೆ.

6. ನಾನು ಸ್ಥಳಕ್ಕೆ ಹೋದಾಗ ಆರೋಪಿತರು ಮತ್ತು ಇತರರು ಸ್ಥಳದಲ್ಲಿದ್ದರು ಎಂದು ನಾನು ಹೇಳಿರುವುದು ಸುಳ್ಳು ಎಂದರೆ ಸರಿಯಲ್ಲ. ಅವರವರ ನಡುವೆ ಏನು ಮಾತುಕತೆಯಾಗಿತ್ತು ಎಂದು ನನಗೆ ಗೊತ್ತಿಲ್ಲ ಎಂದರೆ ಸರಿ. ನಾನು ಹೋದಾಗ ಆಟೋ ಮಾತ್ರ ಇದ್ದಿತ್ತು ಎಂದರೆ ಸರಿ.

7. ದಿಃ 05-04-2017 ರಂದು ನಾನು ಚಾಸಾ.1, 9 ಮತ್ತು ದಿವಾಕರರವರು ಚಾಸಾ.1 ಶಶಿಕುಮಾರರವರ ಆಪೇ ಆಟೋದಲ್ಲಿ ಬೆಳಗ್ಗೆ 9.30 ರ ವೇಳೆಗೆ ಕುಳಿತುಕೊಂಡು ಮೂಡಿಗೆರೆಗೆ ಹೋಗುತ್ತಿದ್ದೆವು ಮತ್ತು ಆಗ ಕಡಿದಾಳು ರಸ್ತೆ ಹೇಮಾವತಿ ನಗರದ ಹತ್ತಿರ ಹೋಗುವಾಗ ಆರೋಪಿ ಹಿಂದಿನಿಂದ ಕಪ್ಪು ಬಣ್ಣದ ಸ್ಯಾಂಟ್ರೋ ಕಾರಿನಲ್ಲಿ ಬಂದು ನಾವು ಹೋಗುತ್ತಿದ್ದ ಆಟೋದ ಹಿಂಬಾಗಕ್ಕೆ ಡಿಕ್ಕಿಪಡಿಸಿದ ಮತ್ತು ಸದರಿ ಕಾರನ್ನು ಆರೋಪಿ ಚಾಲನೆ ಮಾಡುತ್ತಿದ್ದರು ಮತ್ತು ಆಗ ಚಾಸಾ.1 ರವರು ಆರೋಪಿಯನ್ನು ತಪ್ಪು ನಿಮ್ಮದೇ ಎಂದು ಕೇಳಿದರು ಮತ್ತು ಆಗ ಆರೋಪಿ ಏಕಾಏಕಿ ಚಾಸಾ.1 ರವರಿಗೆ ತಲೆಗೆ, ಕಾಲಿಗೆ ಕಲ್ಲಿನಿಂದ ಹೊಡೆದರು ಮತ್ತು ಅಲ್ಲದೇ ಹೊಲೆಯ ಸೂಳೆಮಕ್ಕಳ ಎಂದು ಅವಾಚ್ಯವಾಗಿ ಬೈದರು ಮತ್ತು ಅಲ್ಲದೇ ನೀವು ತೋಟಕ್ಕೆ

ಹೋಗುವವರು, ನಿಮಗೇಕೆ ಬೇಕು ಆಟೋ ಎಂದು ಹೇಳಿದರು ಮತ್ತು ನಂತರ ಚಾಸಾ.9 ಮತ್ತು 10 ರವರ ಯಾಕೆ ಹಾಗೇ ಬೈಯ್ಯುತ್ತಿದ್ದೀರ ಎಂದು ಕೇಳಿದಾಗ ಆರೋಪಿ ಚಾಸಾ.9 ರವರಿಗೆ ಎಡಕೈಯನ್ನು ತಿರುಚಿ ತಲೆಯ ಹಿಂಭಾಗಕ್ಕೆ ಹೊಡೆದರು ಮತ್ತು ಅಲ್ಲದೇ ಚಾಸಾ.10 ರವರ ಕಾಲಿಗೆ ಕಲ್ಲಿನಿಂದ ಆರೋಪಿ ಹೊಡೆದಿರುತ್ತಾರೆ ಮತ್ತು ಅಲ್ಲದೇ ಚಾಸಾ.9 ಹಾಗೂ 10 ರವರಿಗೆ ಆರೋಪಿಯು ಅವಾಚ್ಯವಾಗಿ ಬೈದಿರುತ್ತಾರೆ ಮತ್ತು ಅಷ್ಟರಲ್ಲಿ ನಾನು ಊರಲ್ಲಿರುವಾಗ ಚಾಸಾ.9 ರವರು ಕರೆ ಮಾಡಿ ಸ್ಥಳಕ್ಕೆ ಬರುವಂತೆ ನನಗೆ ಹೇಳಿದರು ಮತ್ತು ನಾನು ಸ್ಥಳಕ್ಕೆ ಬಂದಾಗ ಆರೋಪಿಯು ಅವರೊಂದಿಗೆ ಗಲಾಟೆ ಮಾಡಿ ಹೊಡೆಯುತ್ತಿದ್ದರು ಮತ್ತು ಅಷ್ಟರಲ್ಲಿ ಅಕ್ಕಪಕ್ಕದವರು ಬಂದು ಬಿಡಿಸುವಾಗ ಆರೋಪಿ ತನ್ನ ಕಾರನ್ನು ಸ್ಟಾರ್ಟ್ ಮಾಡಿಕೊಂಡು ಹೋದರು ಮತ್ತು ಈ ಬಗ್ಗೆ ನಾನು ಪೋಲೀಸರಿಗೆ ಹೇಳಿಕೆ ಕೊಟ್ಟಿದ್ದೇನೆ ಎಂದು ನಾನು ಹೇಳಿರುವುದು ಸುಳ್ಳು ಎಂದರೆ ಸರಿಯಲ್ಲ.

8. ಆಟೋವನ್ನು ಹಾಗೂ ಆರೋಪಿ ಪ್ರತಾಪ್ ನ ಕಾರನ್ನು ಹಾಗೂ ಆರೋಪಿ ಹಲ್ಲೆಗೆ ಉಪಯೋಗಿಸಿದ ಕಲ್ಲನ್ನು ನೋಡಿದರೆ ಗುರುತಿಸುತ್ತೇನೆ ಎಂದು ನಾನು ಹೇಳಿರುವುದು ಸುಳ್ಳು ಎಂದರೆ ಸರಿಯಲ್ಲ. ಆರೋಪಿಯ ಸಾಂಟ್ರೋ ಕಾರಿನ ಸಂಖ್ಯೆ ಕೆಎ-18/ಎಂ.ಎ.0464 ಆಗಿರುತ್ತದೆ ಮತ್ತು ಆರೋಪಿಯು, ಚಾಸಾ.1 ರವರು ಪರಿಶಿಷ್ಟಜಾತಿಗೆ ಸೇರಿದವರು ಎಂದು ಗೊತ್ತಿದ್ದರೂ ಸಹ ಅವರ ಕೊರಳ ಪಟ್ಟಿ ಹಿಡಿದು, ಕೆನ್ನೆಗೆ, ಮುಖ್ಕೆ ಮತ್ತು ಕಾಲಿಗೆ ಹೋಡೆದು, ಹೊಲೆಯ ಸೂಳೆ ಮಕ್ಕಳಾ, ಬೋಳಿ ಮಕ್ಕಳಾ, ನೀವು ಕಾಫಿ ತೋಟದಲ್ಲಿ ಕೂಲಿ ಮಾಡಿಕೊಂಡು ತಿನ್ನೋದು ಬಿಟ್ಟು, ಆಟೋ

ಓಡಿಸುತ್ತೀಯಾ ಬೋಳಿ ಮಗನೆ ಎಂದು ಜಾತಿ ನಿಂದನೆ ಮಾಡಿರುತ್ತಾರೆ ಮತ್ತು ಆ ರೀತಿ ಬೈಯುತ್ತಿರುವಾಗ ಆಟೋದಲ್ಲಿ ಇದ್ದಂತಹ ಗೋಪಾಲ ಮತ್ತು ದಿವಾಕರ ಇವರು ಇಳಿದು ಬಂದು ಆರೋಪಿಯನ್ನು ಕುರಿತು ತಪ್ಪು ನಿಮ್ಮದೇ ಇಟ್ಟುಕೊಂಡು ಅವರಿಗೆ ಹೊಡೆಯುವುದು, ಬೈಯುವುದು ಮಾಡುತ್ತಿದ್ದೀರಲ್ಲ ಎಂದು ಕೇಳಿರುತ್ತಾರೆ ಮತ್ತು ಆಗ ಪ್ರತಾಪನು ದಿವಾಕರನ ಎಡಗೈಯನ್ನು ತಿರುಚಿ, ಎದೆಗೆ ಕೈಯಿಂದ ಹೊಡೆದು, ದುಾಡಿ, ನೀವು ಹೊಲೆಯರು, ನಿಮಗೆ ಯಾಕೆ ಬೇಕು ಜೀವನ, ಎಂಬುದಾಗಿ ಜೀವ ಬೆದರಿಕೆ ಹಾಕಿರುತ್ತಾರೆ ಮತ್ತು ಹರೀಶ, ರುದ್ರೇಶ ಮತ್ತು ಇತರರು ಗಲಾಟೆ ಬಿಡಿಸಲು ಹೋದಾಗ ಆರೋಪಿ ತನ್ನ ಕಾರನ್ನು ಸ್ಟಾರ್ಟ್ ಮಾಡಿಕೊಂಡು ಹೋದರು ಮತ್ತು ಪೆಟ್ಟಾಗಿದ್ದ ಗೋಪಾಲ ಮತ್ತು ದಿವಾಕರರವರನ್ನು ಮಹೇಶರವರು ಯಾವುದೋ ವಾಹನದಲ್ಲಿ ಕರೆದುಕೊಂಡು ಹೋಗಿ ಮೂಡಿಗೆರೆ ಆಸ್ಪತ್ರೆಗೆ ಚಿಕಿತ್ಸೆಗೆ ದಾಖಲು ಮಾಡಿದರು ಎಂದು ನಾನು ಹೇಳಿರುವುದು ಸುಳ್ಳು ಎಂದರೆ ಸರಿಯಲ್ಲ.

9. ನಾನು ಹೇಳಿರುವಂತಹ ಕಲ್ಲುಗಳು ರಸ್ತೆಯ ಪಕ್ಕದಲ್ಲಿ ಸಾಕಷ್ಟು ಬಿದ್ದಿರುತ್ತವೆ ಎಂದರೆ ಸರಿ. ಇದೇ ಕಲ್ಲು ಎಂದು ಗುರುತಿಸಲು ಸಾಧ್ಯವಿಲ್ಲ ಎಂದರೆ ಸರಿಯಲ್ಲ.

<u>ಮರು ವಿಚಾರಣೆಃ</u> ಇಲ್ಲ.

(ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸ.ಇ.ಎ.ಒ.

ಸಹಿ/-

(ಕಿರಣ್ ಕಿಣಿ)

1 ನೇ ಹೆಚ್ಚುವರಿ ವಿಶೇಷ ಜಿಲ್ಲಾ ಮತ್ತು
ಸತ್ರ ನ್ಯಾಯಾಧೀಶರು, ಚಿಕ್ಕಮಗಳೂರು.

ಸಾಕ್ಷಿಯ ಸಹಿ